ಶ್ರೀ ಎಸ್. ಗೋಪಾಲಗೌಡ.—ಇದನ್ನು ಗಮನಕ್ಕೆ ತಂದರೆ, ಏನಾದರೂ ಕಟ್ಟಡದ ರೂಪದಲ್ಲಿ ಪರಿಹಾರ ಕೊಡುವುದಕ್ಕೆ ತಯಾರಾಗಿದ್ದೀರಾ?

Sri A. G. RAMACHANDRA RAO.—We will examine that question.

ಶ್ರೀ ಬಿ. ವೈ. ನಿಲೇಗೌಡ.—Building ಫಂಡನ್ನು ಡಿಸ್ಟ್ರಿಕ್ಟ್‌ವಾರಾಗಿ ಹಂಚಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಸಾಮಾನ್ಯವಾಗಿ ಎಲ್ಲಾ ಡಿಸ್ಟ್ರಿಕ್ಟ್‌ಗಳಿಗೂ ಕಡಿಮೆ ಹಣ ದೊರೆಯುವಂತೆ ಹಂಚಿದ್ದೇವೆ.

ಶ್ರೀ ಬಿ. ವೈ. ನಿಲೇಗೌಡ.—ಮಂಡ್ಯ ಡಿಸ್ಟ್ರಿಕ್ಟಿಗೆ ಎಷ್ಟು ಹಂಚಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಬಿ. ವೈ. ನಿಲೇಗೌಡ.—ಎರಡು ಸ್ಕೂಲುಗಳನ್ನು ಮಾತ್ರ ಕಟ್ಟಿದ್ದಾರೆ; ತಾವು ಎರಡೇ ಸ್ಕೂಲಿಗೆ ದುಡ್ಡು ಕೊಟ್ಟಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗಲ್ಲ; ಎಲ್ಲೆಲ್ಲಿ ಕಟ್ಟಡವಿಲ್ಲವೆಂದು ಹೇಳಿದ್ದಾರೋ ಅಲ್ಲಿಗೆ ಕೊಡುತ್ತೇವೆ.

ಶ್ರೀ ಬಿ. ವೈ. ನಿಲೇಗೌಡ.—ಹೋದ ಸಲ ಬಡ್ಜೆಟ್ಟಿನ ಸಂಬಂಧದಲ್ಲಿ ಹೇಳುತ್ತಾ, ಪಾಂಡವಪುರದಲ್ಲಿ 38 ಸ್ಕೂಲುಗಳಿಗೆ ಕಟ್ಟಡಗಳಿಲ್ಲವೆಂದು ಹೇಳಿದ್ದು ಜ್ಞಾಪಕದಲ್ಲಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಜ್ಞಾಪಕದಲ್ಲಿದೆ.

ಶ್ರೀ ಬಿ. ವೈ. ನಿಲೇಗೌಡ.—ಇಲ್ಲಿ ಕೆಲವು ಕಡೆಗಳಿಗೆ 10 15 ಕಟ್ಟಡಗಳನ್ನು ಕೊಟ್ಟಿದ್ದರೂ ಮಂಡ್ಯ ಡಿಸ್ಟ್ರಿಕ್ಟಿಗೆ ಎರಡು ಮಾತ್ರ ಕೊಟ್ಟಿರಲು ಕಾರಣವೇನು?

ಶ್ರೀ ಎ. ಜಿ. ರಾಮಚಂದ್ರರಾವ್.—ಇನ್ನೂ ಕೆಲವು ಡಿಸ್ಟ್ರಿಕ್ಟುಗಳಲ್ಲಿ ಹೀಗೆಯೇ ಇದೆ.

ಶ್ರೀ ಬಿ. ವೈ. ನಿಲೇಗೌಡ.—ಮಂಡ್ಯ ಡಿಸ್ಟ್ರಿಕ್ಟಿನಲ್ಲಿ ಎಲ್ಲೆಲ್ಲಿ ಕಟ್ಟಡವಿದೆಯೆಂದು ಹೇಳಿಲ್ಲ; ಎರಡನ್ನು ಕಟ್ಟಿರುವುದೂ ಕನುಮಾನವೆ ದರೆ ಒಪ್ಪುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಲೆಕ್ಕಾಚಾರದ ಪ್ರಕಾರ ಅಂಕಿ ಅಂಶಗಳನ್ನು ಕೊಟ್ಟಿದೆ.

ಶ್ರೀ ಬಿ. ವೈ. ನಿಲೇಗೌಡ.—ಈ ವರ್ಷವಾದರೂ ಮಂಡ್ಯ ಡಿಸ್ಟ್ರಿಕ್ಟಿಗೆ ಉದಾರವಾಗಿ ಸಹಾಯ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಎಲ್ಲ ಡಿಸ್ಟ್ರಿಕ್ಟಿಗೂ ಕೊಡುವಂತೆ ಅಲ್ಲಿಗೂ ಕೊಡುತ್ತೇವೆ.

ಶ್ರೀ ಬಿ. ವೈ. ನಿಲೇಗೌಡ.—ಗರಾಜ್ ಮಾಡುವವರಿಗೆ ಕೊಡುತ್ತೀರೆಂದು ಕಾಣುತ್ತದೆ.

ಶ್ರೀ ಎ. ಜಿ. ರಾಮಚಂದ್ರರಾವ್.—ಗರಾಜಿಗೆ ಹೆದರುವುದಿಲ್ಲ.

In-patients and Out-patients in Government Hospitals.

Q.—73. Sri B. C. NANJUNDAIYA (Kora).—

Will the Government be pleased to state:—

(*a*) the number of in-patients and out-patients that were visiting hospitals during the last three years before the introduction of raised rates of fees in Mysore and Bangalore City area hospitals, district headquarter areas and taluk headquarter areas (figures may kindly be given month-war);

(*b*) the number of in-patients and out-patients that visited the above hospitals in the month of January 1953 and February 1953?

A.—Sri T. CHANNIAH (Minister for Public Health and Local Self-Government).—

(*a*) A statement showing year-war is appended (*vide* Appendix) Compilation of monthwar figures will result in waste of time and expenditure disproportionate to the result to be achieved.

(*b*) In-patients .. 51,566
Out-patients .. 2,27,583

[*Vide* Reply to Clause (*a*).]

Statement showing the number of in-patients and out-patients that visited the hospitals during the last three years before the introduction of raised rates of fees in the Mysore State.

Sl. No.	Particulars	In-patients		
		1949	1950	1951
		1	2	3
1	Bangalore District ..	62,866	58,581	66,333
2	Chikmagalur District ..	4,157	4,031	4,352
3	Chitaldrug District ..	4,575	4,826	5,149
4	Hassan District ..	8,242	8,418	8,438
5	Kolar District ..	20,364	16,181	16,167
6	Mandya District ..	3,460	3,524	4,093
7	Mysore District ..	25,816	28,149	29,888
8	Shimoga District ..	7,296	83,060	9,972
9	Tumkur District ..	4,294	5,163	5,751
	Total ..	1,41,070	1,41,933	1,50,140

(Sri T. CHANNIAH.)

Sl. No	Particulars	Out-patients 1949	1950	1951
		4	5	6
1	Bangalore District ..	18,74,857	19,74,452	19,49,455
2	Chikmagalur District ..	5,01,154	3,68,667	3,70,822
3	Chitaldrug District ..	5,34,815	5,23,527	5,42,532
4	Hassan District ..	7,72,085	6,38,990	5,58,884
5	Kolar District ..	9,38,970	9,56,517	9,48,726
6	Mandya District .	4,74,062	4,85,864	4,16,100
7	Mysore District ..	12,65,671	13,51,087	12,47,166
8	Shimoga District ..	6,94,880	7,73,163	7,17,147
9	Tumkur District ..	6,35,453	6,19,105	6,34,832
	Total ..	76,81,947	76,91,372	73,85,654

ಶ್ರೀ ಬಿ. ಸಿ. ನಂಜುಂಡಯ್ಯ.—(ಬ) ಪ್ರಶ್ನೆಗೆ ಉತ್ತರವಾಗಿ ಇ-ಪೇಷೆಂಟ್‌ಗಳು 51,566 ಎಂದೂ, ಔಟ್-ಪೇಷೆಂಟ್‌ಗಳು 9,27,593 ಎಂದೂ ಹೇಳಿದ್ದೀರಿ ಇದು ಯಾವುದಾದರೂ ನಿರ್ದಿಷ್ಟವಾದ ಆಸ್ಪತ್ರೆಗಳಿಗೆ ಅನ್ವಯಿಸುತ್ತದೆಯೇ ಅಥವಾ ಸಂಸ್ಥಾನಾದ್ಯಂತ ಎಲ್ಲಾ ಆಸ್ಪತ್ರೆಗಳಿಗೂ ಅನ್ವಯಿಸುತ್ತದೆಯೇ ?

ಶ್ರೀ ಟಿ ಚನ್ನಯ್ಯ.—ಈ ಅಂಕಿಗಳು ಸಂಸ್ಥಾನದ ಎಲ್ಲಾ ಆಸ್ಪತ್ರೆಗಳಿಗೂ ಅನ್ವಯಿಸುತ್ತವೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಇಲ್ಲಿ ಕೊಟ್ಟಿರುವ ತಮ್ಮ ಪಟ್ಟಿ ಎರಡು ತಿಂಗಳುಗಳಿಗೆ ಸಂಬಂಧಪಟ್ಟ ಅಂಕಿಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಬಿ. ಸಿ. ನಂಜುಂಡಯ್ಯ.—13ನೆಯ ಪುಟದಲ್ಲಿ ಕೊಟ್ಟಿರುವ ಪಟ್ಟಿಯಲ್ಲಿ ತೋರಿಸಿರುವಂತೆ 1949, 1950 1951ನೆಯ ಇನವಿಗಳಲ್ಲಿ ಆಸ್ಪತ್ರೆಗಳಲ್ಲಿನ ಇ-ಪೇಷೆಂಟ್‌ಗಳ ಸಂಖ್ಯೆಯನ್ನು ನೋಡಿದರೆ ಎರಡು ತಿಂಗಳುಗಳಿಗೆ ಸರಾಸರಿ 1,000, 23,000, 25,000 ಎಂದು ಗೊತ್ತಾಗುತ್ತದೆ. ಇಲ್ಲಿ ತಾವು ಕೊಟ್ಟಿರುವ ಅಂಕಿ ಪ್ರಕಾರ ಈಚಿನ ಎರಡು ತಿಂಗಳಿಗೆ 51,000 ಎಂದು ಗೊತ್ತಾಗುತ್ತದೆ. ಅಂದರೆ ಚಾರ್ಜ್ ಜಾಸ್ತಿ ಮಾಡಿದ ಮೇಲೆ ರೋಗಿಗಳ ಸಂಖ್ಯೆ ಬರುವುದು ಒಂದಕ್ಕೆರಡರಷ್ಟು ಜಾಸ್ತಿಯಾಯಿತೆಂದು ಹೇಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—1949, 1950, 1951ಕ್ಕೆ ವರ್ಷಕ್ಕೆ ಒಟ್ಟು ಎಷ್ಟು ರೋಗಿಗಳು ಬರುತ್ತಿದ್ದರೆಂದು ಹೇಳಿದೆ ಆದರೆ, 1951ಕ್ಕೆ ಸಂಬಂಧಪಟ್ಟಹಾಗೆ ಒಟ್ಟು ವರ್ಷಕ್ಕೆ ಲೆಕ್ಕಕೊಟ್ಟಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು ಕೊಟ್ಟಿರುವ ಲೆಕ್ಕಗಳ ಪ್ರಕಾರವೇ ಚಾರ್ಜ್ ಜಾಸ್ತಿಮಾಡುವುದಕ್ಕೆ ಮುಂಚೆ ಎರಡು ತಿಂಗಳಿಗೆ 23,000 ಇದ್ದದ್ದು ಚಾರ್ಜ್ ಜಾಸ್ತಿಯಾದ ಮೇಲೆ 51,000ಕ್ಕೆ ಬಂದಿರುವಂತೆ ಕಾಣುತ್ತದೆ. ಇದು ನಿಜವೇ ?

ಶ್ರೀ ಟಿ. ಚನ್ನಯ್ಯ.—ಅಂಕಿಗಳನ್ನು verify ಮಾಡಬೇಕಾಗಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—14ನೆಯ ಪುಟದಲ್ಲಿ 'Special ward collections' ಎಂದುಹೇಳಿ 1952ನೆಯ ಇನವಿಗೆ ವಿಕ್ಟೋರಿಯಾ ಆಸ್ಪತ್ರೆಗೆ 1041 ಮತ್ತು 6,583 ರೂಪಾಯಿಗಳೆಂದೂ 1953ನೆಯ ಇನವಿಗೆ 7,804 ಮತ್ತು 6,169 ರೂಪಾಯಿಗಳೆಂದೂ ತೋರಿಸಿದೆ. ಇದರಿಂದ ಚಾರ್ಜ್ ಜಾಸ್ತಿಮಾಡಿದ್ದರಿಂದ ಉತ್ಪತ್ತಿ ಕಡಮೆಯಾಯಿತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಬಹಳ ಕಡಮೆಯಾಗಿಲ್ಲ; ಸ್ವಲ್ಪ ಕಡಮೆಯಾಗಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಚಾರ್ಜ್ ಜಾಸ್ತಿಯಾದ್ದರಿಂದ ಸ್ಪೆಷಲ್ ವಾರ್ಡ್‌ಗಳು ಜನರಿಗೆ ಸಿಕ್ಕುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಅದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ. ಮುಂದಿನ ಪ್ರಶ್ನೆಗೆ ಸಂಬಂಧಪಟ್ಟಂತೆ ಕಾಣುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ ಆಸ್ಪತ್ರೆಯಲ್ಲಿ 1949ರಲ್ಲಿ 7,296 ಜನ ಚಿಕಿತ್ಸೆ ಪಡೆದರು, 1950ರಲ್ಲಿ ಈ ಸಂಖ್ಯೆ 8,060 ಆಯಿತು. ಇಷ್ಟು ಹೆಚ್ಚು ಹೇಗಾಯಿತು ಕಾಲರಾ ಮುಂತಾದ ಹೆಚ್ಚಿನ ಖಾಯಿಲೆಗಳೇನಾದರೂ ಇದ್ದವೇ ಆ ವರ್ಷ ?

Sri T. CHANNIAH.—It is a clerical mistake.

ಅಧ್ಯಕ್ಷರು:—ಮುದ್ರಣದ ತಪ್ಪು. ಸರಿ ಪಡಿಸುತ್ತಾರೆ.

Collection made by various hospitals in respect of fees for special wards.

Q.—372. Sri P. R. RAMAIYA (Basavangudi).—

Will the Government be pleased to state :—

(*a*) the collections made by the various hospitals, *i.e.*, the Victoria Hospital, Bangalore City, the Vani Vilas Hospital, Banaglore City, the Bowring Hospital, Bangalore Civil